# ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1089**
ಸದಸ್ಯರ ಹೆಸರು : ಡಾ.ಯತೀಂದ್ರ.ಎಸ್
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 25.07.2024

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ ಕೆಲವು ವರ್ಷಗಳಿಂದ ಬರುವ ಸತ್ಯಕ್ಕೆ ದೂರವಾದ ಸುದ್ದಿ ಒಂದು ಸಾಮಾಜಿಕ ಪಿಡುಗಾಗಿ ಪರಿಣಮಿಸಿದ್ದು, ಈ ಪಿಡುಗನ್ನು ನಿಯಂತ್ರಿಸಲು ಇಲಾಖೆ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗುವ ಸುದ್ದಿಗಳನ್ನು ಪರಿಶೀಲಿಸಿ, ಪ್ರಕಟವಾದ ಸುದ್ದಿಯಲ್ಲಿನ ಅಂಶಗಳ ಬಗ್ಗೆ ಸ್ಪಷ್ಟೀಕರಣ ನೀಡಲು ಕೋರಿ ಸಂಬಂಧಿಸಿದ ಇಲಾಖೆಗಳಿಗೆ ಕಳುಹಿಸಿಕೊಡಲಾಗುತ್ತದೆ. ಸಂಬಂಧಪಟ್ಟ ಇಲಾಖೆಗಳು ನೀಡುವ ಸ್ಪಷ್ಟೀಕರಣ ಹಾಗೂ ಸುದ್ದಿಗೆ ಸಂಬಂಧಿಸಿದ ವಿವರಗಳನ್ನು ಸತ್ಯಕ್ಕೆ ದೂರವಾದ ಸುದ್ದಿ ಪ್ರಕಟಿಸಿದ ಮಾಧ್ಯಮ ಸಂಸ್ಥೆಗಳಿಗೆ ಕಳುಹಿಸಿ ಸ್ಪಷ್ಟೀಕರಣ ಪ್ರಕಟಿಸಲು ತಿಳಿಸಲಾಗುತ್ತಿದೆ. |
| (ಆ) | ಸಾರ್ವಜನಿಕರು ಸುದ್ದಿಗಳ ನೈಜತೆಯನ್ನು ಪರಿಶೀಲಿಸಲು ಯಾವುದಾದರೂ ನಿರ್ದಿಷ್ಟವಾದ ಆನಲೈನ್ ಪೋರ್ಟಲ್ ಇದೆಯೇ; ಇದ್ದಲ್ಲಿ ವಿವರ ಒದಗಿಸುವುದು; | ಸಾರ್ವಜನಿಕರು ಸುದ್ದಿಗಳ ನೈಜತೆಯನ್ನು ಪರಿಶೀಲಿಸಲು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವ್ಯಾಪ್ತಿಯಲ್ಲಿ ಯಾವುದೇ ಅಧಿಕೃತವಾದ ಆನ್‌ಲೈನ್ ಪೋರ್ಟಲ್ ಹೊಂದಿರುವುದಿಲ್ಲ. |
| (ಇ) | ಸಾರ್ವಜನಿಕರಿಗೆ ಸುಳ್ಳು ಸುದ್ದಿ ಬಗ್ಗೆ ಅರಿವು ಮೂಡಿಸಲಾಗುತ್ತಿದೆಯೇ? (ವಿವರ ಒದಗಿಸುವುದು) | ಸಾರ್ವಜನಿಕರಿಗೆ ಸುಳ್ಳು ಸುದ್ದಿಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಿಯಮಿತವಾಗಿ ಹಮ್ಮಿಕೊಳ್ಳಲಾಗುತ್ತಿದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಅಧೀನ ಸಂಸ್ಥೆಯಾಗಿರುವ ಕರ್ನಾಟಕ ಮಾಧ್ಯಮ ಅಕಾಡೆಮಿ ಮೂಲಕ ರಾಜ್ಯದ ವಿವಿಧೆಡೆ ವಿಚಾರ ಸಂಕಿರಣಗಳನ್ನು ಆಯೋಜಿಸುತ್ತಿದೆ (ಉದಾಹರಣೆಗೆ : ಬೆಂಗಳೂರಿನಲ್ಲಿ "ಮಾಧ್ಯಮ : ಸಾಮಾಜಿಕ ಜಾಲತಾಣ", "ಪತ್ರಿಕೋದ್ಯಮದ ಸವಾಲುಗಳು ಅಂದು-ಇಂದು-ಮುಂದು", ಬೀದರ್‌ನಲ್ಲಿ "ಪತ್ರಿಕಾ ನೀತಿ ಮತ್ತು ಡಿಜಿಟಲ್ ಯುಗದ ಸವಾಲುಗಳು"). ಹೀಗೆ ಮುಂತಾದ ಕಡೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಾರ್ವಜನಿಕರಿಗೆ ಸುಳ್ಳು ಸುದ್ದಿಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. |

**ಸಂಖ್ಯೆ: ಕೆಸಿಐ/195/ಪಿಐಪಿ/2024**

(ಸಿದ್ದರಾಮಯ್ಯ)
ಮುಖ್ಯಮಂತ್ರಿ